**<u>ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಪುನಹಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಂದುವರಿಂದ ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

14. ನನ್ನ ಮನೆಯಿಂದ ವಶಪಡಿಸಿಕೊಂಡ ಡಿವಿಆರ್ ನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಡಿವಿಆರ್ ಇರುವ ಅರಗಿನಿಂದ ಸೀಲು ಮಾಡಿದ ಕವರನ್ನು ತೆರೆಯಲು ಅನುಮತಿ ಕೋರಿದ್ದು, ಆಲಿಸಿ ಅನುಮತಿ ನೀಡಲಾಯಿತು). ಕವರನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ಡಿವಿಆರ್, ಅದಕ್ಕೆ ಸಂಬಂಧಿಸಿದ ಕೇಬಲ್ ಮತ್ತು adopter ಇರುತ್ತದೆ. ಸಾಕ್ಷಿಯು ಸದರಿ ಡಿವಿಆರ್ ನ್ನು ನೋಡಿ ಅದು ತನಗೆ ಸೇರಿದ್ದೆಂದು ಗುರುತಿಸುತ್ತಾರೆ. ಸದರಿ ಡಿವಿಆರ್ ನ್ನು ಅದಕ್ಕೆ ಸಂಬಂಧಪಟ್ಟ ಕೇಬಲ್ ಮತ್ತು adopter ಒಟ್ಟಿಗೆ ಮು.ಮಾ-7 ರಂತೆ ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಡಿ ಎಸ್ ವಕೀಲರಿಂದಃ-</u>**

15. ಆರೋಪಿತರು ಹಾಗೂ ಆರೋಪಿಯ ತಾಯಿ ಒಟ್ಟಿಗೆ ವಾಸವಾಗಿದ್ದರು. ನನ್ನ ಮನೆ ತಡಂಬೈಲ್ ಎಂಬಲ್ಲಿದೆ. ನನ್ನ ಹೊಟೇಲ್ ಮುಕ್ಕದಲ್ಲಿದೆ. ಆರೋಪಿತರು ಮತ್ತು ಆರೋಪಿತರ ತಾಯಿ ನನಗೆ ಸೇರಿದ ಮುಲ್ಕಿಯ ಕರ್ನಾಡ್ ನಲ್ಲಿರುವ ಮನೆಯಲ್ಲಿ ಬಾಡಿಗೆಗೆ ಇದ್ದರು. ನನ್ನ ಹೊಟೇಲ್ ನಿಂದ ಆರೋಪಿತರು ವಾಸವಾಗಿದ್ದ ಬಾಡಿಗೆ ಮನೆಗೆ ಸುಮಾರು 8 -9 ಕಿ. ಮೀಟರ್ ದೂರ ಆಗುತ್ತದೆ. ನಾನು ಕೊಟ್ಟ ಬಾಡಿಗೆ ಕಟ್ಟಡವು ಲೇಬರ್ ಶೇಡ್ ನಂತಿದ್ದು ಒಂದೊಂದು

ಮನೆಯಲ್ಲಿ ಒಂದು ಕಿಚನ್ ಹಾಗೂ ಒಂದು ಹಾಲ್ ಮಾತ್ರ ಇತ್ತು. ನಾನು ಒಟ್ಟು ಅಂತಹ 12 ಮನೆಗಳನ್ನು ಹೊಂದಿದ್ದೆ. ಆರೋಪಿತರು ವಾಸವಾಗಿದ್ದ ಶೇಡ್ ನಿಂದ ಸುಮಾರು 50 ರಿಂದ 100 ಮೀಟರ್ ದೂರದಲ್ಲಿ ನನ್ನ ತಾಯಿ ಬೇರೊಂದು ಮನೆಯಲ್ಲಿ ವಾಸವಾಗಿದ್ದರು. ಶೇಡ್ ನಲ್ಲಿ ವಾಸವಾಗಿದ್ದವರೊಂದಿಗೆ ನಾನು ಯಾವುದೇ ಲಿಖಿತ ಬಾಡಿಗೆ ಕರಾರನ್ನು ಮಾಡಿಕೊಂಡಿರಲಿಲ್ಲ. ಮೂರು ಜನ ಆರೋಪಿತರು ನಾನು ಬಾಡಿಗೆ ನೀಡಿದ ಮನೆಯಲ್ಲಿಯೇ ತಾಯಿಯೊಂದಿಗೆ ಚಿಕ್ಕಂದಿನಿಂದಲೂ ವಾಸವಾಗಿದ್ದರು. ಆರೋಪಿತರು ಅವರ ತಾಯಿಯೊಂದಿಗೆ ಜಗಳವಾಗಿ ಹಿಂಸೆ ಮಾಡುತ್ತಿದ್ದರು ಎಂದು ಆರೋಪಿತರ ತಾಯಿ ನನಗೆ ತಿಳಿಸಿದ್ದನು ನಾನು ನನ್ನ ತಾಯಿಗೆ ತಿಳಿಸಿರಲಿಲ್ಲ. ನನ್ನ ತಾಯಿ ನನ್ನಲ್ಲಿ ಹಲವು ಬಾರಿ ಆರೋಪಿತರು ಅವರ ತಾಯಿ ಸುಮಿತ್ರ ರವರಿಗೆ ಕುಡಿದು ಬಂದು ಗಲಾಟೆ ಮಾಡುತ್ತಿದ್ದ ಬಗ್ಗೆ ಹೇಳಿದ್ದರು. ಈ ವಿಚಾರವನ್ನು ನಾನು ಪೋಲಿಸರಿಗೆ ತಿಳಿಸಿರಲಿಲ್ಲ. ಈ ಪ್ರಕರಣದಲ್ಲಿನ ದೂರನ್ನು ಕೊಡುವುದಕ್ಕಿಂತ ಮೊದಲು ನಾನು ಆರೋಪಿತರ ವಿರುದ್ಧ ಅವರು ತಮ್ಮ ತಾಯಿಗೆ ತೊಂದರೆ ಕೊಡುತ್ತಾರೆಂದು ಯಾವುದೇ ದೂರನ್ನು ಕೊಟ್ಟಿರಲಿಲ್ಲ. ಆರೋಪಿತರ ತಾಯಿ ನನ್ನ ತಾಯಿ ಅಲ್ಲಿಗೆ ಹೋದಾಗ ನೋಡುಕೊಳ್ಳುತಿದ್ದಲ್ಲದೇ ತೋಟದ ಕೆಲಸವನ್ನು ಸಹ ಅವರು ಮಾಡುತ್ತಿದ್ದರಿಂದ ಅವರಿಂದ ಬಾಡಿಗೆ ತೆಗೆದುಕೊಳ್ಳುತ್ತಿರಲಿಲ್ಲ.

16. ಸುಮಿತ್ರ ರವರು ಆತ್ಮಹತ್ಯೆ ಮಾಡಿಕೊಳ್ಳುವ ಸುಮಾರು ಒಂದು ಎರಡು ವರ್ಷಗಳ ಮೊದಲು ನಾನು ಅಲ್ಲಿ ಸಿಸಿಟಿವಿ ಕ್ಯಾಮರ ಹಾಕಿಸಿದ್ದೆ. ಸಿಸಿಟಿವಿ ಕ್ಯಾಮರವನ್ನು ನನ್ನ ಮೊಬೈಲ್ ಗೆ ಲಿಂಕ್ ಮಾಡಿಕೊಂಡಿದ್ದು ಮೊಬೈಲ್ ಮೂಲಕ

ನೋಡಿಕೊಳ್ಳುತ್ತಿದ್ದೇನು. ಸಿಸಿಟಿವಿಗೆ ಹಾಕಿದ ಸಿಮ್ ನ್ನು ಪೋಲಿಸರು ನನ್ನಿಂದ ಪಡೆದುಕೊಂಡಿರಲಿಲ್ಲ. ಸಿಸಿಟಿವಿಗೆ ಅಳವಡಿಸಿದ ಸಿಮ್ ನಲ್ಲಿ storage facility ಇರಲಿಲ್ಲ. ನನ್ನ ಮೊಬೈಲ್ ನಲ್ಲಿ ಸಿಸಿಟಿವಿ ದೃಶ್ಯಾವಳಿಗಳನ್ನು ರೇಕಾರ್ಡಿಂಗ್ ಮಾಡಲು ಅವಕಾಶ ಇತ್ತು. ಸುಮಿತ್ರರವರು ಕಾರವಾರಕ್ಕೆ ಬಸ್ಸಿನಲ್ಲಿ ಒಬ್ಬರೇ ಹೋಗಿದ್ದರು. ಆರೋಪಿತರೇ ಅವರ ತಾಯಿಯನ್ನು ಕಾರವಾರದಿಂದ ಕರೆದುಕೊಂಡು ಬಂದಿದ್ದರು. ನನ್ನ ಎದುರಿನಲ್ಲಿ ಆರೋಪಿತರಿಗೂ ಹಾಗೂ ಅವರ ತಾಯಿಯ ನಡುವೆ ಯಾವತ್ತೂ ಸಹ ಜಗಳ ಆಗಿರಲಿಲ್ಲ. ಸಿಸಿಟಿವಿಯಲ್ಲಿಯು ಸಹ ಆರೋಪಿತರಿಗೂ ಮತ್ತು ಅವರ ತಾಯಿಯ ನಡುವೆ ಜಗಳವಾದದ್ದನ್ನು ನಾನು ನೋಡಿರಲಿಲ್ಲ.

17. ನಾನು ದಿನಾಂಕ 31.08.2023 ರಂದು ಸಂಜೆ ಸುಮಾರು 6.00 – 6.30 ಸಮಯದಲ್ಲಿ ಸಿಸಿಟಿವಿಯ ದೃಶ್ಯಾವಳಿಯನ್ನು ಮೊಬೈಲ್ ನಲ್ಲಿ ನೋಡಿದ್ದೆ. ಆ ಸಮಯದಲ್ಲಿ ಮೃತ ಸುಮಿತ್ರ ಮತ್ತು ಅವರ ಮಕ್ಕಳು ಒಟ್ಟಿಗೆ ಇದ್ದು ಮನೆಯ ಬಳಿ ಸ್ವಚ್ಚ ಮಾಡುತ್ತಿದ್ದರು. ಆರೋಪಿತರು ವಾಸವಾಗಿದ್ದ ಬಾಡಿಗೆ ಮನೆಗೆ ಹೊಂದಿಕೊಂಡಂತೆ ಇರುವ ಬೇರೆ ಮೂರು ಬಾಡಿಗೆ ಮನೆಯಲ್ಲಿ ಆ ಸಮಯದಲ್ಲಿ ಬಾಡಿಗೆದಾರರು ವಾಸವಾಗಿದ್ದರು. ಅಂತಹ ಬಾಡಿಗೆ ಮನೆಗಳಲ್ಲಿ ಬಾಡಿಗೆದಾರರು ಏರುಧ್ವನಿಯಲ್ಲಿ ಮಾತನಾಡುವುದು, ಮಾತಿಗೆ ಮಾತು ಬೆಳೆಸಿಕೊಳ್ಳುವುದು ಸಾಮಾನ್ಯ ಎಂದರೆ ಸರಿಯಲ್ಲ.

18. ಸುಮಿತ್ರ ರವರು ಅವರ ಗಂಡ ತೀರಿ ಹೋದ ಮೇಲೆ ಮಾನಸಿಕವಾಗಿ ಖಿನ್ನಗೊಂಡು ಮುಕ್ಕದ ಶ್ರೀನಿವಾಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು

ಎಂದರೆ ನನಗೆ ಗೊತ್ತಿಲ್ಲ. ಸುಮಿತ್ರರವರು ಕೆಲಸಕ್ಕೆ ಹೊರಗಡೆ ಸಹ ಹೋಗುತ್ತಿದ್ದರು, ಕೊನೆಯ ಬಾರಿ ನನಗೆ ಸುಮಿತ್ರರವರು ಫೋನ್ ಮಾಡಿದ ಸಮಯದಲ್ಲಿ ಆರೋಪಿತರು ಅವರೊಂದಿಗೆ ಜಗಳ ಮಾಡಿದ ಬಗ್ಗೆ ಹೇಳಿರಲಿಲ್ಲ. ಸುಮಿತ್ರರವರು ಮೃತಪಟ್ಟ ದಿನ ನಾನು ಸಿಸಿಟಿವಿ ಕ್ಯಾಮರದ ದೃಶ್ಯಾವಳಿಯನ್ನು ನನ್ನ ಮೊಬೈಲ್ ಮೂಲಕ ನೋಡಿದ್ದೆ. ಆ ಸಮಯದಲ್ಲಿ ಅಲ್ಲಿ ಹುಡುಗರು ಓಡಾಡಿಕೊಂಡಿದ್ದರು. ಆರೋಪಿತರು ಅವರ ಮನೆಯಿಂದ ಆಚೆ ಈಚೆ ಓಡಾಡುತ್ತಿದ್ದರು. ನಾನು ದಿನಾಂಕ 31.08.2023 ರಂದು ಘಟನಾ ಸ್ಥಳಕ್ಕೆ ಹೋದಾಗ ರಾತ್ರಿ ಸುಮಾರು 11.10 ಆಗಿತ್ತು. ನಾನು ಅಲ್ಲಿಗೆ ಹೋದಾಗ ಮೂರು ಜನ ಆರೋಪಿತರು ಅಲ್ಲಿಯೇ ಇದ್ದರು. ಬೇರೆ ಜನರು ಸಹ ಸೇರಿದ್ದರು. ದಿನಾಂಕ 31.08.2023 ರಂದು ನನ್ನ ತಾಯಿ ಘಟನಾ ಸ್ಥಳದ ಸಮೀಪದಲ್ಲಿರುವ ಮನೆಯಲ್ಲಿಯೇ ವಾಸವಾಗಿದ್ದು ಆ ದಿನ ಅವರು ನನಗೆ ಸಂಜೆ 6.00 ಗಂಟೆಯಿಂದ ರಾತ್ರಿ 11.00 ಗಂಟೆಯವರೆಗೂ ಯಾವುದೇ ಫೋನ್ ಕರೆ ಮಾಡಿರಲಿಲ್ಲ. ನಾನು ದಿನಾಂಕ 29.08.2023 ರಂದು ಬಾಡಿಗೆ ಮನೆಯ ಬಳಿ ಹೋದಾಗ ಸುಮಿತ್ರ ನನ್ನನ್ನು ಭೇಟಿಯಾಗಿದ್ದರು . ಆ ದಿನ ಅವರೊಂದಿಗೆ ನಾನು ಯಾವುದೇ ಮಾತುಕತೆ ಮಾಡಿರಲಿಲ್ಲ.

19. ಸುಮಿತ್ರರವರು ಸಾಮಾನ್ಯವಾಗಿ ನನಗೆ ದಿನವು ಫೋನ್ ಮಾಡಿ ಮಾತನಾಡುತ್ತಿದ್ದರು. ಸುಮಿತ್ರರವರು ನನ್ನ ಬಳಿ ಅವರ ಯಾವ ಮಗ ಅವರಿಗೆ ಹೋಗಿ ಸಾಯಿ ಎಂದು ಹೇಳಿದ್ದ ಎಂದು ನನಗೆ ಹೇಳಿರಲಿಲ್ಲ. ನಾನು ಸುಮಿತ್ರರವರನ್ನು ಆಸ್ಪತ್ರೆಗೆ ದಾಖಲಿಸಿದ ನಂತರ ಸುಮಾರು ರಾತ್ರಿ ಒಂದು

ಗಂಟೆಯವರೆಗೂ ಆಸ್ಪತ್ರೆಯಲ್ಲಿಯೇ ಇದ್ದೆ. ಆಸ್ಪತ್ರೆಯಿಂದ ನಾನು ನೇರವಾಗಿ ಮುಲ್ಕಿ ಪೋಲಿಸ್ ಠಾಣೆಗೆ ದೂರು ಕೊಡಲು ಹೋಗಿದ್ದೆ. ಮುಲ್ಕಿ ಪೋಲಿಸ್ ಠಾಣೆಗೆ ಹೋಗುವಂತೆ ಯಾರು ಸಹ ನನಗೆ ಹೇಳಿರಲಿಲ್ಲ. ಆಸ್ಪತ್ರೆಯವರು ನನ್ನನ್ನು ಸುರತ್ಕಲ್ ಪೋಲಿಸ್ ಠಾಣೆಗೆ ಕಳುಹಿಸಿರಲಿಲ್ಲ. ಮುಲ್ಕಿ ಪೋಲಿಸ್ ಠಾಣೆಯಲ್ಲಿ ನಾನೇ ಬರೆದುಕೊಟ್ಟಿದ್ದೆ. ಸುಮಿತ್ರ ರವರು ಅವರು ಮಕ್ಕಳು ಅವರ ಮಾತನ್ನು ಕೇಳದಿದ್ದು ಮತ್ತು ಮಧ್ಯಪಾನ ಮಾಡಿ ಬಂದು ಸುಮಿತ್ರರವರಿಗೆ ಹೊಡೆಯುತ್ತಿದ್ದು ಅವರು ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ಅಂದಾಜಿನಲ್ಲಿ ಹೇಳಿದ್ದೇನೆ. ಆ ಬಗ್ಗೆ ನನಗೆ ಯಾವುದೇ ನಿಖರ ಮಾಹಿತಿ ಇರಲಿಲ್ಲ.

20. ಘಟನೆಯ ಮರುದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದಾಗ ಆರೋಪಿತರು ಸ್ಥಳದಲ್ಲಿದ್ದರು. ಆರೋಪಿತರು ಎಲ್ಲಿಯು ಓಡಿ ಹೋಗಿರಲಿಲ್ಲ. ಅವರು ಪೋಲಿಸರ ವಶದಲ್ಲಿದ್ದರು. ಆರೋಪಿತರಿಗೂ ಮತ್ತು ಅವರ ತಾಯಿಗೂ ಯಾವುದೇ ಜಗಳವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸುಮಿತ್ರರವರು ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದು ಅವರೇ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸುಮಿತ್ರ ರವರ ಆತ್ಮಹತ್ಯೆಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿದ್ದು ಕೇಳಿದೆ, ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು